





## ವಿಕೇಂದ್ರೀಕರಣದ ತುರ್ತು

—ಹರೀಶ್ ಹಂದೆ, ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತರು

ಗಾಂಧೀಜಿ ಬಹುಮುಖ್ಯವಾಗಿ ಪ್ರತಿಪಾದಿಸಿದ ವಿಚಾರಗಳಲ್ಲಿ ವಿಕೇಂದ್ರೀಕರಣವೂ ಒಂದು. ನಾವು ಮಾಡುತ್ತಿರುವ ಕೆಲಸದ ಮೂಲಧ್ಯೇಯ ವಿಕೇಂದ್ರಿಕರಣವೇ.

'ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ' ಎಂದು ಹೇಳಿಕೊಳ್ಳುತ್ತೇವೆ. ಆದರೆ ನಮ್ಮ ಸೇವೆಗಳಲ್ಲಿ ಪ್ರಜಾಪ್ರಭುತ್ವ ಇಲ್ಲ. ಸಂಪನ್ಮೂಲಗಳ ವಿಷಯದಲ್ಲಿಯೂ ನಾವು ವಿಕೇಂದ್ರೀಕರಣವನ್ನು ಸಾಧಿಸಬೇಕಾದ ಅಗತ್ಯ ಇದೆ. ಇದರಿಂದಾಗಿ ಕೆಲವೇ ಜನರು ಎಲ್ಲ ಸಂಪನ್ಮೂಲಗಳ ಮೇಲೆ ಏಕಸ್ವಾಮ್ಯ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಸಂಪನ್ಮೂಲ ವಿಕೇಂದ್ರೀಕರಣ ಸಾಧಿಸಲು ಸಾಧ್ಯವಾದರೆ ಆರೋಗ್ಯ ಮತ್ತು ಶಿಕ್ಷಣವನ್ನೂ ವಿಕೇಂದ್ರೀಕರಣಗೊಳಿಸಲು ಸಾಧ್ಯವಾಗುತ್ತದೆ.

ನಮ್ಮ ಆರೋಗ್ಯಸೇವೆಯಲ್ಲಿ ಪ್ರಜಾಪ್ರಭುತ್ವ ಇಲ್ಲ. ನಮ್ಮ ಶಿಕ್ಷಣದಲ್ಲಿ ಪ್ರಜಾಪ್ರಭುತ್ವ ಇಲ್ಲ. ಆ ಎರಡೂ ಕ್ಷೇತ್ರಗಳಲ್ಲಿ ಏಕಸ್ವಾಮ್ಯ ಇದೆ. ಶಿಕ್ಷಣ–ಆರೋಗ್ಯ ಕ್ಷೇತ್ರದಲ್ಲಿ ವಿಕೇಂದ್ರೀಕರಣ ಸಾಧ್ಯವಾದರೆ, ಆಗ ಬಡವರ ಬದುಕಿನಲ್ಲಿ 'ಪ್ರಜಾಪ್ರಭುತ್ವ' ಬರುತ್ತದೆ. ಆಗಲೇ ದೇಶವೂ ಸುಸ್ಥಿರವಾಗಿರಲು ಸಾಧ್ಯ.

ಇಂದು ಸಮಾಜದಲ್ಲಿ ವ್ಯಾಪಕವಾಗಿ ಹೆಚ್ಚುತ್ತಿರುವ ಬಡವ–ಶ್ರೀಮಂತರ ನಡುವಿನ ಕಂದರಕ್ಕೆ ಕಾರಣವೂ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಏಕಸ್ವಾಮ್ಯವೇ ಆಗಿದೆ. ಈ ವಿಷಯದಲ್ಲಿ ಗಾಂಧೀಜಿ ಹೇಳಿದ ವಿಕೇಂದ್ರೀಕರಣದ ಕಲ್ಪನೆ ಇಂದಿನ ನಮ್ಮ ಸಮಾಜಕ್ಕೆ ಬಹಳ ಮುಖ್ಯ.

ಏಕಸ್ವಾಮ್ಯದ ಸ್ವರೂಪ ಹೇಗೆಲ್ಲ ಇರುತ್ತದೆ ಎನ್ನುವುದಕ್ಕೆ ಭಾಷೆಯ ಉದಾಹರಣೆಯನ್ನೇ ತೆಗೆದುಕೊಳ್ಳಬಹುದು. ಇಂದು ನಮ್ಮ ದೇಶದಲ್ಲಿ ಇಂಗ್ಲಿಷ್ ಎನ್ನುವುದು ಒಂದು ಜಾತಿ ವ್ಯವಸ್ಥೆಯಾಗಿ ರೂಪುಗೊಂಡಿದೆ. ಯಾರಿಗೆ ಇಂಗ್ಲಿಷ್ ಬರುತ್ತದೆಯೋ ಅವರು ಸುಶಿಕ್ಷಿತರು ಎಂಬ ಭಾವನೆ ಇದೆ. ಇದು ಪೊಳ್ಳು ಮತ್ತು ತಪ್ಪು ಸಿದ್ಧಾಂತ. ಚೀನಾಕ್ಕೆ ಹೋದರೆ ಚೈನೀಸ್ ಭಾಷೆಗೆ ಮಹತ್ವ ಇದೆ. ಫ್ರಾನ್ಸ್‌ನಲ್ಲಿ ಫ್ರೆಂಚ್ ಭಾಷೆಗೆ ಮಹತ್ವ ಇದೆ. ನಮ್ಮ ದೇಶದಲ್ಲಿ ಕನ್ನಡ, ಒರಿಯಾ, ಬೆಂಗಾಲಿಯಂಥ ಪ್ರಾದೇಶಿಕ ಭಾಷೆಗಳಿಗೆ ಯಾಕೆ ಮಹತ್ವ ಇಲ್ಲ? ಇಂಗ್ಲಿಷ್ ಭಾಷೆ ಏಕೆ ಅಷ್ಟೊಂದು ಮಹತ್ವ ಪಡೆದುಕೊಳ್ಳುತ್ತಿದೆ? ಇದು ಕೇಂದ್ರೀಕೃತ ವ್ಯವಸ್ಥೆಯ ಕುರುಹು. ಎಲ್ಲರೂ ಒಂದೇ ಭಾಷೆ ಮಾತಾಡಬೇಕು ಎನ್ನುವ ಏಕಸ್ವಾಮ್ಯದ ಮನಃಸ್ಥಿತಿ. ಈ ಮನಃಸ್ಥಿತಿ ಹೋಗಿ ವಿಕೇಂದ್ರೀಕರಣಗೊಂಡರೆ ಮಾತ್ರ ಕನ್ನಡ, ಹಿಂದಿ, ತೆಲುಗುವಿನಂಥ ಪ್ರಾದೇಶಿಕ ಭಾಷೆಗಳು ಅರಳುತ್ತವೆ. ಭಾರತ ದೇಶದ ಚೆಲುವು ಇರುವುದೇ ಈ ವಿಕೇಂದ್ರೀಕೃತ ವೈವಿಧ್ಯದಲ್ಲಿ.

ಗಾಂಧೀಜಿ ಪ್ರತಿಪಾದಿಸಿದ ವಿಕೇಂದ್ರೀಕರಣದ ಕಲ್ಪನೆಯನ್ನು ನಮ್ಮ ಸಮಾಜದ ಎಲ್ಲ ವಲಯಗಳಿಗೆ ಅನ್ವಯಿಸುವುದೇ ನಮ್ಮ ಇಂದಿನ ತುರ್ತು.

## ಬರಲಿರುವ ಕಾಲದ ತತ್ವಜ್ಞಾನಿ

**–ಎ.ಪಿ. ಅಶ್ವಿನ್ ಕುಮಾರ್**

ಸೀನಿಯರ್ ಫೆಲೋ, ಅಹಮದಾಬಾದ್ ವಿವಿ

ನನಗೆ ಗಾಂಧಿ ಯಾಕೆ ಮುಖ್ಯ? ಅಹಿಂಸೆಗೇ? ಸತ್ಯಕ್ಕೇ? ಸಮಾಜ ಸುಧಾರಣೆಗೇ? ಅಥವಾ ಸ್ವಾತಂತ್ರ್ಯಕ್ಕೇ? ಇವೆಲ್ಲಾ ತನ್ನಷ್ಟಕ್ಕೆ ಮುಖ್ಯವೇ ಇರಬಹುದು. ಆದರೆ, ಇವುಗಳಿಂದ ಈಗ ನನಗೇನಾಗಬೇಕಿದೆ? ಮಧ್ಯಮವರ್ಗದ ಜನ ನಾವು ಹಿಂಸೆಯನ್ನು ಕಂಡರೆ ಸ್ವಾಭಾವಿಕವಾಗಿಯೇ ದೂರ ಸರಿಯುವವರು. ಅದಕ್ಕೆ ಗಾಂಧಿಯೇ ಬೇಕು ಅಂತೇನೂ ಇಲ್ಲ. ಸತ್ಯವನ್ನು ಸರಿಸುಮಾರು ಗೌರವಿಸುವವರು. ಸಮಾಜ ಸುಧಾರಣೆಗೆ ಹೇಗಿದ್ದರೂ ನಮ್ಮ ಜೈಕಾರ ಇದ್ದೇ ಇದೆ. ಇನ್ನು ಸ್ವಾತಂತ್ರ್ಯ. ಅದು ಸಿಕ್ಕಾಗಿದೆಯಲ್ಲ? ತೀರಾ ಫಿಲಾಸಫಿಕಲ್ ಮಟ್ಟದಲ್ಲಿ 'ಯಾರಿಗೆ ಬಂತು ಎಲ್ಲಿಗೆ ಬಂತು ಸ್ವಾತಂತ್ರ್ಯ' ಅಂತೆಲ್ಲಾ ಕೇಳುವ ಉಮೇದೇನೂ ನಮಗಿಲ್ಲ. ನಮ್ಮಲ್ಲಿ ಕೆಲವರಿಗಿದ್ದರೂ ನನಗಂತೂ ಖಂಡಿತಾ ಇಲ್ಲ. ಹಾಗಾದರೆ, ಗಾಂಧಿಯನ್ನು ನಾವು ಮೀರಿ ಆಗಿದೆ ಅಂತಲೇ ಆಯಿತಲ್ಲ. ಗಾಂಧಿಯ ಕುರಿತು ಇನ್ನು ಮಿಕ್ಕ ಮಾತೆಲ್ಲಾ ಸುಮ್ಮನೆ ಕಾಲಹರಣ.

ಇನ್ನೊಂದು ರೀತಿಯಲ್ಲಿ ನೋಡಿ. ನಮ್ಮ ಆಧುನಿಕ ಬದುಕಿನಲ್ಲಿ ಒಂದು ಆಳದ ಬಿಕ್ಕಟ್ಟಿದೆ. ಆದರೆ ಅದು ನಮ್ಮ ನಿತ್ಯದ ಗೋಳಿನಲ್ಲಿ ಅನುಭವಕ್ಕೇ ಬರುವುದಿಲ್ಲ. ಹಾಸಿಹೊದೆಯುವಷ್ಟು ಸಾಮಾಜಿಕ ಸಮಸ್ಯೆಗಳು, ರಾಜಕೀಯದ ವ್ಯಾಜ್ಯಗಳು, ಫೇಸ್ಬುಕ್ಕ ರಂಪಾಟಗಳು, ಮಹಿಳೆಯರ ಶೋಷಣೆ, ದೀನದಲಿತರ ದಾರಿದ್ರ್ಯ. ಇವಿಷ್ಟು ಸಾಲದು ಎನ್ನುವಂತೆ ಈಗ ಕರಗದ ಪ್ಲಾಸ್ಟಿಕ್ ತ್ಯಾಜ್ಯ, ಬೀಳದ ಮಸೀದಿ, ಏಳದ ಮಂದಿರ, ಸೋಲದ ಅಲ್ ಕೈದಾ, ಕರೆಯದ ಗೋವು, ಬೆಳೆಯದ ಪೈರು.